# ಏಕತೆಯ ಮಹಾಮಂತ್ರ

ವನರಾಗ ಶರ್ಮಾ
ಕಲೆ: ಸಂತೋಷ್ ಸಸಿಹಿತ್ಲು



ಪ್ರಾಚೀನ ಕಾಲದಲ್ಲಿ ಜಪಾನ್ ದೇಶದಲ್ಲಿ ಯಾಮಾತೋ ಎಂಬ ಪ್ರಸಿದ್ಧ ರಾಜ ಆಳುತ್ತಿದ. ಅವನಿಗೆ ಓರ್ವ ವೃದ್ಧ ಮಂತ್ರಿಯಿದ್ದ. ಅವನ ಹೆಸರು ಓಚೋ ಸಾನ್. ಅವನ ಕುಟುಂಬದಲ್ಲಿ ಒಂದು ಸಾವಿರ ಜನರಿದ್ದರು. ಆದರೂ ಅವರು ಪ್ರೀತಿಯಿಂದ ಒಟ್ಟಿಗೇ ಕೂಡಿ ಬಾಳುತ್ತಿದ್ದರು. ಒಟ್ಟಿಗೇ ಊಟ ಮಾಡುತ್ತಿದ್ದರು. ಒಂದು ದಿನವೂ ಅವರು ಜಗಳ ಆಡಿರಲಿಲ್ಲ. ಅವರ ಪ್ರೀತಿ, ಸೌಹಾರ್ದ, ಸಹಬಾಳ್ವೆ ಇಡೀ ಜಪಾನಿನಲ್ಲಿ ಪ್ರಸಿದ್ಧವಾಗಿತ್ತು. ಇದು ರಾಜನಿಗೆ ಗೊತ್ತಾದಾಗ ಅವನಿಗೆ ಆಶ್ಚರ್ಯವಾಯಿತು. ಹೀಗೆ ಸಾವಿರಾರು ಜನ ಒಂದೇ ಕುಟುಂಬದಲ್ಲಿ, ಪ್ರೀತಿಯಿಂದ ಬಾಳುತ್ತಿರುವುದು ಸಾಧ್ಯವೆ? ಇದು ಸುಳ್ಳಾಗಿರಬಹುದು ಎಂಬ ಶಂಕೆ ಮೂಡಿತು. ಯಾವುದಕ್ಕೂ ಇದನ್ನು ಪರೀಕ್ಷಿಸಿಯೇ ನೋಡೋಣ ಎಂದು ರಾಜ, ವೃದ್ಧ ಮಂತ್ರಿಯ ಮನೆಗೆ ಹೋದ. ಮಹಾರಾಜರೇ ಬಂದಿದ್ದಾರೆಂದು ವೃದ್ಧಮಂತ್ರಿ ತುಂಬ ಆದರದಿಂದ ಬರಮಾಡಿಕೊಂಡು ಕುಳ್ಳಿರಿಸಿದ. ಹಣ್ಣು ಹಂಪಲು, ಪಾನೀಯ ನೀಡಿ ಉಪಚರಿಸಿದ. ವೃದ್ಧ ಮಂತ್ರಿಯ ಮನೆಯಲ್ಲಿ ಸಾವಿರಾರು ಜನ ವಾಸ ಮಾಡಿಕೊಂಡಿರುವುದು ರಾಜನಿಗೆ ಖಾತ್ರಿಯಾಯಿತು. ಆನಂತರ ಮಂತ್ರಿ; ದಯಮಾಡಿಸಿದ ಕಾರಣವೇನೆಂದು ವಿನಯದಿಂದ ಕೇಳಿದ. ಆಗ ರಾಜ ಹೇಳಿದ; 'ನಿಮ್ಮ ಕುಟುಂಬದಲ್ಲಿ ಸಾವಿರಾರು ಜನ ಒಟ್ಟಿಗೇ ಜೀವನ ನಡೆಸುತ್ತಿರುವ ಸಂಗತಿಯನ್ನು ಕೇಳಿ ಆಶ್ಚರ್ಯವಾಯಿತು. ಈಗ ಕಣ್ಣಾರೆ ಕಂಡೆ ಕೂಡ. ಇದರ ಗುಟ್ಟನ್ನು ತಿಳಿದುಕೊಳ್ಳೋಣ ಎಂದು ಬಂದೆ' ಎಂದ.

ವೃದ್ಧಮಂತ್ರಿ ಓಚೋ ಸಾನ್ ಮೊಮ್ಮಗನೋರ್ವನಿಗೆ ಲೆಕ್ಕಣಿಕೆ ಮತ್ತು ಮಸಿದೌತಿ ತರಲು ಹೇಳಿದ. ಆಮೇಲೆ ಒಂದು ಕಾಗದದ ಮೇಲೆ ಸ್ವಲ್ಪ ಹೊತ್ತು ಏನೋ ಬರೆದ. ಆನಂತರ ಅದನ್ನು ರಾಜನಿಗೆ ನೀಡಿದ. ರಾಜ ಮಂತ್ರಿ ಕೊಟ್ಟ ಕಾಗದದ ಮೇಲೆ ಕಣ್ಣು ಹಾಯಿಸಿದ. ಮತ್ತೆಮತ್ತೆ ಓದಿದ. ಅದರಲ್ಲಿ ಒಂದೇ ಶಬ್ದ ನೂರು ಸಾರಿ ಪುನರಾವರ್ತನೆಯಾಗಿ ಬರೆದುಕೊಂಡಿತ್ತು. ಅದೇನೆಂದರೆ 'ಸಹನಶೀಲತೆ, ಸಹನಶೀಲತೆ, ಸಹನಶೀಲತೆ...' ಎಂದು. 'ಓಹ್! ನಿಮ್ಮ ಕುಟುಂಬ ನಮ್ಮದೇಶದ ಹೆಮ್ಮೆ' ಎಂದು ಉದ್ಗರಿಸಿದ.

ಆ ನಂತರ ವೃದ್ಧ ಮಂತ್ರಿ ನಡುಗುವ ದನಿಯಲ್ಲಿ 'ಸ್ವಾಮಿ, ನಮ್ಮ ಏಕತೆಯ ರಹಸ್ಯ ಇದೇ ಸಹನಶೀಲತೆ ಎಂಬ ಮಹಾಮಂತ್ರದಲ್ಲಿದೆ. ನಮ್ಮನ್ನೆಲ್ಲ ಭಾವೈಕ್ಯದ ದಾರದಿಂದ ಬಂಧಿಸಿರುವ ಮಹಾಮಂತ್ರವೇ ಇದು; 'ಸಹನಶೀಲತೆ' ಎಂದು ಹೇಳಿದ. ರಾಜ ಯಾಮಾತೋನಿಗೆ ತುಂಬಾ ಸಂತೋಷವಾಯಿತು. ರಾಜ ತನ್ನ ಕೊರಳಿನ ಹಾರವನ್ನು ತೆಗೆದು ವೃದ್ಧಮಂತ್ರಿಯ ಕೊರಳಿಗೆ ಹಾಕಿದ. ಆತನನ್ನು ಚೆನ್ನದ ಝರಿಯ ಶಾಲು ಹೊದೆಸಿ, ಹಣ್ಣು ಹಂಪಲು ನೀಡಿ ಆದರದಿಂದ ಸನ್ಮಾನಿಸಿ ಗೌರವಿಸಿದ.